ಯೋಜನೆಯಾಗಿರುವುದರಿಂದ, ತಾವು ಕೊಟ್ಟಿರುವಂತಹ ಸಲಹೆಯನ್ನು ಪ್ರಸ್ತಾಪ ಮಾಡುತ್ತೇವೆ. ಆದರೆ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಕೆಲಸ ಕಾರ್ಯಗಳನ್ನು ಕೈಗೊಳ್ಳುವುದರ ಬಗ್ಗೆ ಇನ್ನೂ ಕೂಡ ಸಾಧ್ಯತೆ ಇದೆ, ಅದನ್ನು ಬೇರೆ ಯೋಜನೆಗಳಲ್ಲಿ ತೆಗೆದುಕೊಳ್ಳುತ್ತೇವೆ.

ಸುರಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ

80 (728): ಶ್ರೀ ನರಸಿಂಹನಾಯಕ್ (ರಾಜೂಗೌಡ) (ಸುರಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುರಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಮತ್ತು ಶಸ್ತ್ರ ತಂತ್ರಜ್ಞರುಗಳ ಹುದ್ದೆಗಳನ್ನು ನಿಯೋಜನೆಯ ಮೇಲೆ ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಸಾಕಷ್ಟು ಜನ ಮಲೇರಿಯಾ, ಆನೇಕಾಲು, ಇನ್ನಿತರ ರೋಗಗಳಿಗೆ ತುತ್ತಾಗಿ ಬಳಲುತ್ತಿರುವ ರೋಗಿಗಳ ರಕ್ಷಣೆಗೆ ಕೈಗೊಂಡಿರುವ ಮತ್ತು ಕೈಗೊಳ್ಳುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸುರಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ 4 ತಜ್ಞ ವೈದ್ಯರ ಹುದ್ದೆ ಮಂಜೂರಾಗಿರುತ್ತದೆ. ಇಬ್ಬರು ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇನ್ನಿಬ್ಬರು ತಜ್ಞ ವೈದ್ಯರ ಹುದ್ದೆಯನ್ನು ಲಭ್ಯತೆಯ ಮೇರೆಗೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆ) ಮಲೇರಿಯಾ, ಆನೇಕಾಲು ರೋಗ, ಕರುಳುಬೇನೆ, ಕಾಲರಾ ಮುಂತಾದ ರೋಗಗಳ ನಿಯಂತ್ರಣಕ್ಕೆ ಸರ್ಕಾರವು ಈಗಾಗಲೇ ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ.

ಮಲೇರಿಯಾ ನಿಯಂತ್ರಣ ಕ್ರಮಗಳು :

1. ಎಲ್ಲ ಜ್ವರ ಪೀಡಿತರ ಸಮೀಕ್ಷೆ, ರಕ್ತಲೇಪನ ಸಂಗ್ರಹಣೆ, ಪರೀಕ್ಷೆ, ರೋಗಪತ್ತೆ ಮತ್ತು ಚಿಕಿತ್ಸಾ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ.
2. ರೋಗವಾಹಕ ಸೊಳ್ಳೆಗಳ ನಿಯಂತ್ರಣ ಕ್ರಮಗಳಾದ ಕೀಟನಾಶಕ ಸಿಂಪಡಣೆ, **ಲಾರ್ವಾಹಾರಿ** ಮೀನಿನ ಉಪಯೋಗ ಇತ್ಯಾದಿಗಳನ್ನು ನಿಯತಕಾಲಿಕವಾಗಿ ಕೈಗೊಳ್ಳಲಾಗುತ್ತಿದೆ.
3. ಆರೋಗ್ಯ ಶಿಕ್ಷಣದ ಮೂಲಕ ಜನಜಾಗೃತಿ ಮೂಡಿಸಲಾಗುತ್ತಿದೆ.

ಆನೇಕಾಲು ರೋಗ ನಿಯಂತ್ರಣ ಕ್ರಮಗಳು :

ಮೈಕ್ರೋ ಫೈಲೇರಿಯಾ ಪತ್ತೆಗಾಗಿ ರಾಜ್ಯದಲ್ಲಿ 25 ಚಿಕಿತ್ಸಾಲಯಗಳು, 8 ನಿಯಂತ್ರಣ ಘಟಕಗಳು ಮತ್ತು 1 ಸಮೀಕ್ಷಾ ಕೋಶದ ಮೂಲಕ ರಾತ್ರಿ ರಕ್ತಲೇಪನ ಸಂಗ್ರಹಣೆ, ಮೈಕ್ರೋ ಫೈಲೇರಿಯಾ ಪತ್ತೆ ಮತ್ತು ಡಿ.ಇ.ಸಿ. ಗುಳಿಗೆಗಳಿಂದ ಚಿಕಿತ್ಸಾ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ, ನಿಯಂತ್ರಣ ಘಟಕಗಳ ಮುಖಾಂತರ ಸೊಳ್ಳೆ ನಿಯಂತ್ರಣ ಕಾರ್ಯವನ್ನು ಸಹ ಅನುಷ್ಠಾನಗೊಳಿಸಲಾಗುತ್ತಿದೆ. ಆನೇಕಾಲು ರೋಗ ನಿವಾರಣೆಗಾಗಿ, ಜಿಲ್ಲೆಯಾದ್ಯಂತ 2004ರಿಂದ ಮುಂದಿನ 5 ವರ್ಷಗಳ ವರೆಗೆ ಸಾಮೂಹಿಕ ಡಿ.ಇ.ಸಿ. ಔಷಧ ನೀಡಿಕೆ ಕಾರ್ಯಕ್ರಮವನ್ನು ಜಾರಿಗೊಳ್ಳಲಾಗಿದೆ.

ಕರುಳು ಬೇನೆ:ಕಾಲರಾ ನಿಯಂತ್ರಣ ಕ್ರಮಗಳು:

1. ತಾಲ್ಲೂಕು ಮಟ್ಟದಲ್ಲಿ ಸಿ.ಸಿ.ಟಿ. ತಂಡಗಳನ್ನು (ಕಾಲರಾ ನಿಯಂತ್ರಣ ತಂಡಗಳು) ರಚಿಸಲಾಗಿದೆ.
2. ಈ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿಯಂತ್ರಣ ಕ್ರಮಗಳ ಬಗ್ಗೆ ಸುತ್ತೋಲೆಗಳನ್ನು ಕಳುಹಿಸಲಾಗಿದೆ.
3. ರೋಗವು ಉಲ್ಬಣಗೊಂಡಲ್ಲಿ ವೈದ್ಯರ ತಂಡ ಸ್ಥಳದಲ್ಲಿಯೇ ಚಿಕಿತ್ಸೆ ನೀಡುವಂತೆ ತಾತ್ಕಾಲಿಕ ಔಷಧಾಲಯದ ವ್ಯವಸ್ಥೆಯನ್ನು ಮಾಡಲಾಗಿದೆ.
4. ಜೀವ ರಕ್ಷಕ ಔಷಧಿಗಳ ದಾಸ್ತಾನನ್ನು ಸಾಕಷ್ಟು ಪ್ರಮಾಣದಲ್ಲಿ ಎಲ್ಲಾ ಕೇಂದ್ರಗಳಲ್ಲಿ ಇರಿಸಲಾಗಿದೆ.
5. ನೀರಿನ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷಿಸಲಾಗುತ್ತಿದೆ ಮತ್ತು ಕುಡಿಯುವ ನೀರಿನ ಮೂಲಗಳನ್ನು ಅಗತ್ಯವಿದ್ದೆಡೆ ಕ್ಲೋರಿನೇಷನ್ ಮಾಡಲಾಗುತ್ತಿದೆ.
6. ಸಾರ್ವಜನಿಕರಿಗೆ, ಗೃಹೋಪಯೋಗಿ ನೀರಿಗೆ ಬೆರೆಸಲು ಅನುಕೂಲವಾಗುವಂತೆ ಹ್ಯಾಲೊಜನ್ ಗುಳಿಗೆಗಳನ್ನು ವಿತರಿಸಿ, ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ.

ಈ ತಾಲ್ಲೂಕಿನಲ್ಲಿ 2004ನೇ ಸಾಲಿನಲ್ಲಿ ಇದುವರೆಗೆ ಟೈಫಾಯಿಡ್, ವೈರಲ್ ಹೆಪಟೈಟಿಸ್ ರೋಗಗಳು ವರದಿಯಾಗಿರುವುದಿಲ್ಲ.

ಶ್ರೀ ನರಸಿಂಹ ನಾಯಕ್ : ಮಾನ್ಯ ಅಧ್ಯಕ್ಷರೆ, ಸುರಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ಮತ್ತು ತಂತ್ರಜ್ಞರುಗಳು ಹುದ್ದೆಗಳಿಗೆ ನಿಯೋಜನೆಯ ಮೇರೆ ಭರ್ತಿ ಮಾಡುವ ಕ್ರಮ ಕೈಗೊಳ್ಳುವುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ, ಸುರಪುರದಲ್ಲಿ ಆಸ್ಪತ್ರೆಯಲ್ಲಿ ನಾಲ್ಕು ಜನ ತಜ್ಞ ವೈದ್ಯರುಗಳಿದ್ದು, ಇದುವರೆವಿಗೆ ಆ ಆಸ್ಪತ್ರೆಯೂ ಉದ್ಘಾಟನೆಯಾದ ನಂತರ ಇದುವರೆವಿಗೂ ಅಲ್ಲಿ ಇಬ್ಬರೇ ವೈದ್ಯರುಗಳಿದ್ದು ಅಲ್ಲಿ ಸರಿಯಾಗಿ ಕೆಲಸ ಮಾಡದೆಯೇ ಸುರಪುರದಲ್ಲಿ ರೋಗಿಗಳಿಗೆ ಬಹಳ ತೊಂದರೆಯಾಗಿದೆ. ಅದಕ್ಕೋಸ್ಕರ ಅಲ್ಲಿ ಸರಿಯಾಗಿ ಮೆಡಿಸನ್ಸ್‌ಗಳು ಇಲ್ಲ, ಆ ಆಸ್ಪತ್ರೆಯನ್ನು ಯಾರಾದರೂ ಹೋಗಿ ನೋಡಿದಾಗ ಅಲ್ಲಿ ಒಬ್ಬರು ಸಿಬ್ಬಂದಿವರ್ಗದವರು ಇರುವುದಿಲ್ಲ. ವಾಚ್‌ಮನ್ ಮತ್ತು ಯಾರಾದರೂ ಒಬ್ಬರು ಇರುತ್ತಾರೆ. ಅದಕ್ಕೋಸ್ಕರ ರೋಗಿಗಳು ಬಹಳ ನಿರಾಶೆಯಾಗಿರುತ್ತಾರೆ. ಇದರ ಬಗ್ಗೆ ಸರ್ಕಾರ ಹೇಗೆ ಕ್ರಮಕೈಗೊಳ್ಳುತ್ತಾರೆಂದು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ಕೂಡ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಕೇಂದ್ರಗಳಲ್ಲಿ ನಮಗೆ ಈ ತರಹದ ವೈದ್ಯರುಗಳು ಮತ್ತು ತಜ್ಞವೈದ್ಯರುಗಳು ಲಭ್ಯತೆಯೂ ಬಹಳ ಕಡಿಮೆ ಇದೆ. ಇದ್ದಂತಹ ತಜ್ಞವೈದ್ಯರುಗಳೂ ಕೂಡ ದೊಡ್ಡ ದೊಡ್ಡ ನಗರಗಳಲ್ಲಿ ಇರುವುದಕ್ಕೆ ಇಷ್ಟಪಡುತ್ತಾರೆ. ಮತ್ತು ಅವರ ಕುಟುಂಬ ವರ್ಗದವರಿಗೆ ಮಕ್ಕಳ ವಿದ್ಯಾಭ್ಯಾಸ ಹಾಗೂ ಬೇರೆ ಬೇರೆ ಅನುಕೂಲಗಳು ಪ್ರೈವೇಟ್ ಪ್ರಾಕ್ಟೀಸ್ ಎಲ್ಲಾ ಆಕರ್ಷಣೀಯಗಳು ಮೋಹಗಳು ಇರುವುದರಿಂದಾಗಿ ಅವರುಗಳು ಅಲ್ಲಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ನಮ್ಮಲ್ಲಿ ಇದ್ದಂತಹ ನಾಲ್ಕು ತಜ್ಞ ವೈದ್ಯರುಗಳ ಹುದ್ದೆಯಲ್ಲಿ ಎರಡು ಹುದ್ದೆಗಳನ್ನು ಈಗಾಗಲೇ ತುಂಬಲಾಗಿದೆ. ಇನ್ನು ಎರಡು ಹುದ್ದೆಗಳನ್ನು ತುಂಬುವಂತಹ ಪ್ರಯತ್ನವನ್ನು ಸರ್ಕಾರವು ಮಾಡುತ್ತದೆ.

ಶ್ರೀ ನರಸಿಂಹನಾಯಕ್ (ರಾಜೂಗೌಡ) : ನಮ್ಮ ಸುರಪುರ ತಾಲ್ಲೂಕಿನಲ್ಲಿ ಮಲೇರಿಯಾ ಮತ್ತು ಆನೇಕಾಲು ರೋಗ ಮತ್ತು ಕರುಳುಬೇನೆ ರೋಗ ಬಹಳವಿದೆ. ಆದರೆ ಪ್ರಾಥಮಿಕ ಚಿಕಿತ್ಸಾ ಕೇಂದ್ರದಲ್ಲಿ ವೈದ್ಯರುಗಳು ಇರಲಾರದಕ್ಕೋಸ್ಕರ ಅಲ್ಲಿಯ ಜನರು ಬಹಳ ತುಂಬಾ ತೊಂದರೆಯಲ್ಲಿದ್ದಾರೆ. ಇವತ್ತು ಅಲ್ಲಿಗೆ ಯಾರಾದರೂ ವೈದ್ಯರುಗಳು ಬಂದರೆ ಬೆಂಗಳೂರು–ಮೈಸೂರು ಸೈಡ್‌ನವರು ಬಂದು ಮತ್ತೆ 6 ತಿಂಗಳಲ್ಲಿ ಬೇರೆ ಕಡೆಗೆ ವರ್ಗಾವಣೆ ಮಾಡಿಸಿಕೊಂಡು ಹೋಗುತ್ತಾರೆ. ಅದಕ್ಕೋಸ್ಕರ ಇದರ ಬಗ್ಗೆ ಸೂಕ್ತವಾದಂತಹ ಕ್ರಮವನ್ನು ಕೈಗೊಂಡು ಆದಷ್ಟು ಬೇಗನೆ ಆ ರೋಗಗಳನ್ನು ನಿಯಂತ್ರಿಸಲು ಎಲ್ಲಾ ವೈದ್ಯರನ್ನು ಮತ್ತು ಹೆಚ್ಚಿನ ತಾಲ್ಲೂಕು ಕೇಂದ್ರಗಳಿಗೆ, ಹೋಬಳಿ ಕೇಂದ್ರಗಳಿಗೆ ಜಿಲ್ಲಾ ಮಟ್ಟದ ವೈದ್ಯಾಧಿಕಾರಿಗಳನ್ನು ಕಳುಹಿಸಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಬಹಳ ಉತ್ತಮವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ಈ ತಾಲ್ಲೂಕಿನಲ್ಲಿ ಕೊಡ್ಯೆಕಲ್, ಕಕ್ಕೇರಾ ಮತ್ತು ರಾಜಕಲ್ಲೂರ್ ಪ್ರದೇಶಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಈಗಾಗಲೇ ಮಿಲಾಥೀನ್ ಮತ್ತು ಡಿ.ಡಿ.ಟಿ. ಕೀಟನಾಶಕ ಪುಡಿಯನ್ನು ಈಗಾಗಲೇ ಜಿಲ್ಲೆಗಳಿಗೆ ಒದಗಿಸಲಾಗಿದ್ದು ಎರಡನೆ ಸುತ್ತಿನ ಸಿಂಪಡಿ ಕಾರ್ಯ ಕೂಡ ಮುಕ್ತಾಯವಾಗುತ್ತಾ ಬಂದಿದೆ. ಈಗ ಏಪ್ರಿಲ್ ತಿಂಗಳಲ್ಲಿ ರೋಗವಾಹಕ ಸೊಳ್ಳೆಗಳ ನಿರ್ಮೂಲನೆಗಾಗಿ ಧ್ರುವೀಕರಣ ಫ್ಲೆಮಿಂಗ್ ಮಾಡಲಾಗಿದೆ. ಜೈವಿಕ ನಿಯಂತ್ರಣ ಕ್ರಮಗಳಿಗೆ ಒಂದಾದ ಸೊಳ್ಳೆ ಮರಿಯನ್ನು ತಿನ್ನುವಂತಹ ಲಾರ್ವಾಹಾರಿ ಮೀನುಗಳನ್ನು ಬಿಡಲಾಗಿದೆ. ಜೂನ್ ತಿಂಗಳಲ್ಲಿ ಜನಜಾಗೃತಿಯನ್ನು ಮೂಡಿಸುವ ಬಗ್ಗೆ ಆರೋಗ್ಯ ಶಿಕ್ಷಣದ ಬಗ್ಗೆ ಭಿತ್ತಿಪತ್ರಗಳನ್ನು ಮತ್ತು ಕರಪತ್ರಗಳ ಮೂಲಕ ವ್ಯಾಪಕವಾಗಿ ಪ್ರಚಾರವನ್ನು ಕೊಡಲಾಗಿದೆ. ಅವರು ಹೇಳಿದಂತೆ ಎಲ್ಲಾ ವೈದ್ಯರನ್ನು ಅಲ್ಲಿಗೆ ಕಳುಹಿಸಿಕೊಟ್ಟು ಆನೇಕಾಲು ರೋಗದ ನಿಯಂತ್ರಣ ಹಾಗೂ ಮಲೇರಿಯಾ ನಿಯಂತ್ರಣಕ್ಕೆ ತಾವು ಹೇಳಿದಂತೆ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಶ್ರೀ ನರಸಿಂಹನಾಯಕ್ : ಈ ಆನೇಕಾಲು ರೋಗಕ್ಕೆಂದು ಮಾತ್ರೆಗಳನ್ನು ಕೊಡುವುದಕ್ಕೆ ಅಂಗನವಾಡಿ ಕಾರ್ಯಕರ್ತೆಯರಾಗಲಿ ಇನ್ನಿತರ ಕಾರ್ಯಕರ್ತರನ್ನು ಕಳುಹಿಸುತ್ತಿದ್ದೀರಿ, ಅದರಿಂದಾಗಿ ಅವರ ಹತ್ತಿರ ಮಾಹಿತಿ ಇರಲಾರದಕ್ಕೋಸ್ಕರ ಲಾಸ್ಟ್‌ಟೈಮ್ 3 ಕೊಡುವುದರ ಬದಲು 6ನ್ನು ಕೊಟ್ಟು ಕೆಲವೊಂದು ಕಡೆ ಈ ಪ್ರಕರಣದಿಂದಾಗಿ ಕೆಲವು ಜನರು ಸತ್ತರು, ಮತ್ತೆ ಡಾಕ್ಟರ್ ರಿಪೋರ್ಟ್ ಬಂದು ಅವರು ಸತ್ತಿರುವುದು ಬೇರೆ ಕಾರಣಕ್ಕೆಂದು ಹೇಳಿದರು. ಅವರುಗಳು ವೈದ್ಯಾಧಿಕಾರಿಗಳ ಕೈಕೆಳಗಡೆ ಕೆಲಸ ಮಾಡುವಾಗ ಏನಾದರೂ ಮಾಡಿಕೊಳ್ಳಬೇಕಾಗುತ್ತದೆ. ಗರ್ಭಿಣಿಯರಿಗೆ ಈ ಸುರಪುರ ತಾಲ್ಲೂಕು ರಂಗನಪೇಟೆ ರುಕ್ಮಾಪುರ್ ಗ್ರಾಮದಲ್ಲಿ 15 ದಿನ ಹೆರಿಗೆಯಾದಂತಹ ಮಹಿಳೆಗೆ ಔಷಧವನ್ನು ಕೊಟ್ಟು ಹೈಡೋಸ್ ಆಗಿ, ಆ ತಾಯಿ ಇವತ್ತು ಮೃತಪಟ್ಟಿದ್ದಾಳೆ, ಇಂತಹ ಯಾವುದೋ ಔಷಧಿಗಳನ್ನು ಕೊಡುವಂತಹ ಕಾಲಕ್ಕೆ ದಯಮಾಡಿ ವೈದ್ಯಾಧಿಕಾರಿಗಳಿಗೆ ಅಥವಾ ಸಂಬಂಧಪಟ್ಟವರಿಗೆ ಕೊಟ್ಟರೆ ಒಳ್ಳೆಯದು ಅದನ್ನು ಬಿಟ್ಟು ಯಾವುದೋ ಶಿಕ್ಷಕಿಯರನ್ನಾಗಲಿ ಬೇರೆ ಕಾರ್ಮಿಕರಿಗೆ ಕೊಟ್ಟರೆ ತೊಂದರೆಯಾಗುತ್ತದೆ. ಇದುವರೆವಿಗೂ ಅಲ್ಲಿ ಯಾವ ಔಷಧವನ್ನೂ ಸಿಂಪಡಿಸಿರುವುದಿಲ್ಲ. ಮಲೇರಿಯಾಕ್ಕೋಸ್ಕರ ಮತ್ತು ಔಷಧವನ್ನು ಸಿಂಪಡಿಸಬೇಕಾದರೆ ಅಲ್ಲಿ ನೌಕರರುಗಳೇ ಇರುವುದಿಲ್ಲ. ಅಲ್ಲಿ ಸಿಬ್ಬಂದಿವರ್ಗದವರ ಕೊರತೆಯಿರುವುದರಿಂದ ಯಾವ ಕಾರ್ಯಗಳೂ ಆಗುತ್ತಿಲ್ಲ.

10.50 ಎ ಎಂ

ಏಷ್ಯಾದಲ್ಲಿ ಕಕ್ಕೇರಿ ಮತ್ತು ಕೊಡೈಕಲ್ ಗ್ರಾಮ ಮಲೇರಿಯಾ ರೋಗದಲ್ಲಿ ಮೊದಲು ಇದೆ. ಅದಕ್ಕೋಸ್ಕರ ಈ ಎರಡು ಹೋಬಳಿಗಳಿಗೆ ತಾವು ಹೆಚ್ಚಿನ ಲಕ್ಷ್ಯ ಕೊಟ್ಟು ಇನ್ನೊಂದು ಸಾರಿ ಮಲೇರಿಯಾ ಬರಲಾಗದ ಹಾಗೆ, ಆನೇಕಾಲು ರೋಗ ಬರದ ಹಾಗೆ ತಾವು ನೋಡಿಕೊಳ್ಳಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಆ ತಾಲ್ಲೂಕಿನಲ್ಲಿ 3,50,000 ಜನಸಂಖ್ಯೆಯಲ್ಲಿ ಈಗಾಗಲೇ 2,07,900 ಜನಗಳಿಗೆ ಡಿ.ಇ.ಸಿ. ಗುಳಿಗೆಗಳನ್ನು ನುಂಗಿಸಲಾಗಿದೆ; ಮತ್ತು ಅವರುಗಳಿಗೆ ಕೊಡಲಾಗಿದೆ. ಅದೇ ರೀತಿಯಾಗಿ ಅಲ್ಲಿ ವೃಷಣ ನಿರ್ಬಾವು ಚಿಕಿತ್ಸೆ ಮಾಡುವ ಬಗ್ಗೆ ಕ್ಯಾಂಪ್‌ಗಳನ್ನೂ ಕೂಡ ಮಾಡಿದ್ದಾರೆ. ಈಗ 2 ಲಕ್ಷ ರೂಪಾಯಿಗಳನ್ನು ಜಿಲ್ಲಾ ಮಲೇರಿಯಾ ಅಧಿಕಾರಿಗಳಿಗೆ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಮಾಡಿ ಮುಂದಿನ 5 ವರ್ಷಗಳವರೆವಿಗೂ ಕೂಡ ಇದನ್ನು ಮುಂದುವರಿಸಿ ಎನ್ನುವುದರ ಬಗ್ಗೆ ಮಾಡಿದ್ದೇವೆ. ಆದರೆ ತಾವು ಹೇಳಿದಂತೆ ಅನನುಭವಿಯಾದ ಜನಗಳ ಬದಲಾಗಿ ಅನುಭವಿಯಾಗಿರತಕ್ಕಂತಹ ಎಎನ್‌ಎಂ ಮೊದಲಾದಂತಹ ಜನಗಳು ಇದರಲ್ಲಿ ವ್ಯಾಪಕವಾಗಿ ಮತ್ತು ಸರ್ಕಾರಿಯೇತರ ಸಂಸ್ಥೆಗಳೂ ಕೂಡ ಮತ್ತು ಸ್ವಯಂಸೇವಾಸಂಸ್ಥೆಗಳು ಇದರಲ್ಲಿ ಭಾಗವಹಿಸಬೇಕೆಂದು ಹೇಳಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ರಾಜೇಂದ್ರವರ್ಮರವರು,

ಶ್ರೀ ನರಸಿಂಹನಾಯಕ್ : ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು : ಈ ರೀತಿಯಾದರೆ ನಾನು ಕಂಡಕ್ಟ್ ಮಾಡುವುದಕ್ಕಾಗುವುದಿಲ್ಲ. ನಾನು ಮಾನ್ಯ ರಾಜೇಂದ್ರವರ್ಮರವರ ಹೆಸರನ್ನು ಕರೆದಿದ್ದೇನೆ. ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ರಾಜೇಂದ್ರವರ್ಮರವರೇ, ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ನರಸಿಂಹನಾಯಕ್ : ವೈದ್ಯಾಧಿಕಾರಿಗಳನ್ನು ಯಾರನ್ನು ಹಾಕುತ್ತೀರಿ? ಅವರನ್ನು 3–4 ವರ್ಷಗಳ ಕಾಲ ವರ್ಗಾವಣೆ ಮಾಡದ ಹಾಗೆ ಸರ್ಕಾರ ಒಂದು ಕಟ್ಟುನಿಟ್ಟಿನ ಆದೇಶವನ್ನು ಕೊಡಬೇಕು. ಇಲ್ಲದೆಹೋದರೆ ಯಾವುದೋ ವೈದ್ಯಾಧಿಕಾರಿಗಳನ್ನು ನಿಯೋಜಿಸಿದರೆ ಅವರು 3 ಅಥವಾ 4 ತಿಂಗಳಲ್ಲಿ ಹೈರೆಕ್ಮಂಡೇಷನ್ ತಂದು ವರ್ಗಾವಣೆಯನ್ನು ಮಾಡಿಸಿಕೊಂಡು ಹೋಗುತ್ತಾರೆ. ಇದರಿಂದಾಗಿ ನಮ್ಮ ಜನರಿಗೆ ತೊಂದರೆಯಾಗುತ್ತದೆ. ಯಾರಾದರೂ ವೈದ್ಯಾಧಿಕಾರಿಗಳನ್ನು ಹಾಕಿದಲ್ಲಿ ಅವರುಗಳು 3 ವರ್ಷ ಅಲ್ಲಿಂದ ಬೇರೆ ಕಡೆಗೆ ಹೋಗದ ಹಾಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಆಗಬಹುದು.

ಕಾರಂಜಿ ಮತ್ತು ಚುಳುಕಿನಾಳ ಅಣೆಕಟ್ಟುಗಳ ವ್ಯಾಪ್ತಿಯಲ್ಲಿ ಮೀನುಗಾರಿಕೆ ಗುತ್ತಿಗೆ

81 (668): ಶ್ರೀ ರಾಜೇಂದ್ರವರ್ಮ (ಹುಲ್‌ಸೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?